ಸೀತವ್ವ ಎದೆ ಎದೆ ಹೊಡಕೊಂತ ಬಸ್‌ಸ್ಟಾಂಡಿಗೆ ಓಡಿ ಬಂದ್ಳು.

'ಏನಾಯ್ತಿ ಎಪ್ಪಾ, ನನ್ನ ಗಂಡಗ ಕುಡಿಸಬ್ಯಾಡ್ರಿ ಅಂತಂದ್ರು ಕೇಳಾಂಗಿಲ್ಲ ನೀವು. ನಮಗ್ಯಾರು ನೋಡ್ತಾರಿ ಈಗ... ಇದ್ದ ಮಗನೂ ಪರದೇಸಿ ಮಾಡಿಯಲ್ಲೊ...' ಅಂತ ಹಣಿ ಹಣಿ ಬಡಕೊತ ಕುಂತಳು. ಅಷ್ಟರಲ್ಲಿ ನಾಲ್ಕೈದು ಜನ ಸೇರಿ ದ್ಯಾವಪ್ಪಗ ಎತ್ತಿಕೊಂಡು ಮನೆಗೊಯ್ದು ಹೊರಸಿನ ಮ್ಯಾಗ ಹಾಕಿದ್ರು. ಏನೂ ಆಗಿಲ್ಲ, ಬೆನ್ನಿನ ನರ ಬಿಟ್ಟಿರಬೇಕು, ಕಾಲು ಜಾರಿ ಬಿದ್ದಾನ– ಅಂತಂದು ಸಮಾಧಾನ ಹೇಳಿ ತಮ್ಮ ತಮ್ಮ ಮನೆಗೆ ಹೋದ್ರು. ದ್ಯಾವಪ್ಪ ಮಾತ್ರ 'ಸಾಯ್ತಿನ್ರೋ ಯಪ್ಪಾ, ನಾ ಉಳ್ಯಾಂಗಿಲ್ಲ' ಅಂತ ಒಂದೇ ಸಮನೆ ಹಲುಬುತ್ತಿದ್ದ. ಉಳಿದವ್ರು ಗಬಾಗಬಾನೆ ಅವರವರ ಮನೆಗೆ ಹೋದ್ರು. ಸೀತವ್ವ ಗಂಡನ ಮೈ ಕೈ ಮುಟ್ಟಿ 'ಏನು ಮಾಡಿ ಕೊಂಡ್ಯೋ ಶಿವಾ, ಎಷ್ಟು ಹೇಳಿದ್ನಲ್ಲೋ ನಿನಗ. ನಿನ ಬಿಟ್ಟು ನನಗ್ಯಾರೋ ದಿಕ್ಕು'– ಅಂತ ತಲಿ ತಲಿ ಬಡಕೊಂಡು ಗೋಳಿಡುತ್ತಿದ್ರ ಮಗ ಬಸಪ್ಪ 'ಅಪ್ಪಾ ಅಪ್ಪಾ' ಅಂತ ಒಂದೇ ಸವನೆ ಚೀರಾಕತ್ತಿತ್ತು. ಓಣಿ ಜನ ಎಲ್ಲಾ ಓಡಿ ಬಂದು ನೋಡಿ, 'ಟೊಂಕಾ ಹೋದಂಗ ಕಾಣತದ, ಬಸ್ಸಿನ ಮ್ಯಾಗಿಂದ ಬಿದ್ದಾನಂತ. ಇನ್ನ ಜೀವ ಉಳಿದಿದ್ದೆ ದೊಡ್ಡ ಮಾತು ಅಂತ ಹೇಳಿ ಕತ್ತಲಾಗಿದ್ದರಿಂದ ತಮ್ಮ ತಮ್ಮ ಮನೆಗೆ ಹೋದ್ರು. ಇಡೀ ರಾತ್ರಿ ದ್ಯಾವಪ್ಪ ಒಂದೇ ಸವನೆ ನರಳಿ ನರಳಿ ಹೊತ್ತೊಂಟು ಸ್ವಲ್ಪ ಜ್ಜಂಪ ಹತ್ತಿದಂಗಾಗಿ ನಿದ್ರೆ ಹೋದ. ದವಾಖಾನಿಗಿ ತೋರಿಸಲಕ ಬಲ್ಲ್ಯಾಕ ದಿಕ್ಕ ಇಲ್ಲದಿದ್ದ ರಿಂದ ಸೀತವ್ವ ಏನೂ ಮಾಡಲಾಗದೆ ಬಿದ್ದಲ್ಲೇ ಬಿದ್ದಿದ್ದ ದ್ಯಾವಪ್ಪನ ಹೇಲ, ಉಚ್ಚಿ ಬಳಿದು ಜೀವ ಇರುತನಕ ಸೇವಾ ಮಾಡಿದಳು. ನಾಲ್ಕು ತಿಂಗಳು ಮುಗ್ಯಾದರೊಳಗ ದ್ಯಾವಪ್ಪ ತೀರಿಕೊಂಡ.

★ ★ ★

ಗಂಡ ಸತ್ತ ಮ್ಯಾಗೆ ತನಗಿದ್ದ ಒಂದೇ ಆಸ್ತಿ ಅಂದ್ರೆ ಈ ಮಗ ಅಂತ ತಿಳಿದು ಸೀತವ್ವ ಬಸಪ್ಪಗ ಬಾಳಪ್ರೀತಿ, ಸಲುಗೆಯಿಂದ ಬೆಳೆಸಿದ್ಳು. ಬಹಳ ದಿನ ಮಕ್ಕಳಾಗದಿದ್ದದ್ದೂ ಅದಕ್ಕೆ ಕಾರಣವಾಗಿತ್ತು. ಉಂಡಾಡಿ ಗುಂಡನಂಗೆ ಬೆಳೆದ ಬಸಪ್ಪ ಬೇರೆ ಕೆಲಸ ಮಾಡದೆ ಅಪ್ಪ ದ್ಯಾವಪ್ಪನಂಗ ಸತ್ತಲ್ಲಿ, ಕೆಟ್ಟಲ್ಲಿ ಹಲಗಿ ಬಾರಿಸಲಕ ಹೋಗತಿದ್ದ. ಬರು ಬರುತ್ತ ತಿಳುವಳಿಕೆ ಬಂದಾಂಗ ಇದರಲ್ಲೇನೂ ಉಪಯೋಗ ಇಲ್ಲಂತ ತಿಳಿದು ಅದನೂ ಬಿಟ್ಟುಬಿಟ್ಟ. ಎಲ್ಲಾರಂಗ ತಾನೂ ಶೋಕಿ ಮಾಡಬೇಕಂತ ಒಂದು ನೆಹರೂ ಶರ್ಟ್, ಪೈಜಾಮ ಹಾಕ್ಕೊಂಡು ಕಂಡ ಕಂಡವರ ಜೋಡಿ ಊರೂರು ಸುತ್ತಾಕತ್ತ. ಕೂಲಿ ನಾಲಿ ಮಾಡಿ ಮುದುಕಿ ಸೀತವ್ವ ಮಗನಿಗೆ ಕೂಳಾ ಹಾಕ್ತಿದ್ಳು. ಹೀಗಾಂದ್ರ ನನಗ ಕೈಗಿ ಹತ್ತಾಂಗಿಲ್ಲ. ಇವನೂ ಅವರಪ್ಪನಂಗ ಎಲ್ಲಿ ಹಾಳಾಗಿ ಹೋಗ್ತಾನಂತ ತನ್ನ ತವರು ಮನಿ ಕಡೆ ಹುಡುಗಿಗಿ ಗಟ್ಟಿ ಮಾಡಿ ವೈಶಾಕದಾಗ ಲಗ್ನ ಮಾಡಿಬಿಟ್ಳು. ಇನ್ನಾದ್ರೂ ಮಗ ಚೆನ್ನಾಗಿದ್ದಾನೂ... ಸಂಸಾರ ತಲೆಗೆ ಹತ್ತಿತೂ ಅಂದ್ರ ಬಸಪ್ಪ ಉದ್ದ ಬೆಳೆದ್ನೆ ಹೊರತು ಬುದ್ಧಿ ಬೆಳಿಲಿಲ್ಲ. ಒಂದು ದಿನಾನು ಹೆಂಡ್ತಿ ಕಷ್ಟ ಸುಖ ಕೇಳ್ಲಿಲ್ಲ. ಬಟ್ಟೆ ಬರೆ ಅನ್ನಲಿಲ್ಲ. ಚಲೋದು ಕೆಟ್ಟು ಅನ್ನಲಿಲ್ಲ. ಯಾರು ಕರುದ್ರೂ ಅವರ ಗುಡಾ ಊರೂರು ಸುತ್ತಕೊಂತ ಹೋಗುತ್ತಿದ್ದ. ಊಟಾ ತಿಂಡಿ ಪುಗಸಟ್ಟೆ ಸಿಗುತ್ತಿದ್ದುದ ರಿಂದ, ಬಸ್ ಚಾರ್ಜ್ ಕರಕೊಂಡು ಹೋದವ್ರೆ ಹಾಕ್ತಿದ್ದುದ್ದರಿಂದ ಅವನಿಗೇನೂ ಚಿಂತಿ ಇರಲಿಲ್ಲ. ಬಸಪ್ಪ ಇರುತ್ತಿದ್ದ ಖಾಯಂ ಜಾಗ ಒಂದಿತ್ತು. ಅದೆ ಲಚ್ಚವ್ವನ ಮನೆ. ಲಚ್ಚವ್ವನನ್ನ ಎಲ್ಲರು ಟಿಗರಗುಂಡಿ ಲಚ್ಚವ್ವ ಅಂತ ಕರಿತಾ ಇದ್ರು. ಆಕೆಯ ಪಿರ್‍ರೆಗಳು ಗಾತ್ರದಲ್ಲಿ ದೊಡ್ಡವು ಇದ್ದವೋ ಏನ್ನೋ ಕಾರಣಕ್ಕೋ ಏನೋ ಜನ ಹಾಗೆ ಕರಿತಾ ಇದ್ರು. ಗಂಡ ಇದ್ದರೂ ಆತ ಮನೆಯಲ್ಲಿ ಇರುತ್ತಿರಲಿಲ್ಲ. ಗೌಡರ ಬಳಿ ಜೀತಕ್ಕೆ ಇದ್ದ ಆತ ಕಬ್ಬಿನ ಗಾಡಿ ಹೊಡೆಯುವಾಗ ಕಾಲುಜಾರಿ ಬಿದ್ದು ಕಾಲು ಮುರಿದು ಕೊಂಡ ಕಾರಣಕ್ಕೆ ಗೌಡರ ತೋಟದ ಮನೆಯಲ್ಲಿಯೇ ಇರುತ್ತಿದ್ದ. ಅಮಾವಾಸ್ಯೆ, ಹುಣ್ಣಿಮೆಗೆ ಮಾತ್ರ ಮನೆಗೆ ಬಂದು ಜಳಕಾ ಮಾಡಿ ಹೋದನಂದರ ಆಯಿತು. ಲಚ್ಚವ್ವಗೆ ಅರ್ಧ ವಯಸ್ಸಾಗುತ್ತಾ ಬಂದಿದ್ದರು ಮಕ್ಕಳಾಗಿರಲಿಲ್ಲ. ಬಸಪ್ಪ ಇರುವ ಖಾಯಂ ಠೇಕಾ ಲಚ್ಚವ್ವನ ಮನೆಯಾಗಿತ್ತು. ಅದಿಲ್ಲದಿದ್ದರೆ ಇಸ್ಪಿಟ್ ಆಡುವವರಿಗೆ ಸಿಗರೇಟ್, ಬೀಡಿ, ಚಹಾ, ದಾರು ತಂದುಕೊಡುವ ಕೆಲಸ ಬಸಪ್ಪ ಮಾಡುತ್ತಿದ್ದ. ಬಸಪ್ಪ ಇಲ್ಲದೆ ಇದ್ರೆ ಇಸ್ಪೀಟ್ ಆಟ ಇಲ್ಲ. ಅಂತಲೇ ಅರ್ಧ ಊರ ದೇಗುಲ, ತೋಟದ ಮನೆ, ಕೆಲವೊಮ್ಮೆ ಬಸ್‌ಸ್ಟಾಂಡ್ ಕಟ್ಟೆ, ಇಲ್ಲವೆ ಹನುಮಾನ ದೇವರ ಕಟ್ಟೆ ಮುಂದೆ ಇಸ್ಪೀಟ್ ಆಟ ಜೋರಾಗಿ ನಡೀತಿತ್ತು. ಪೊಲೀಸರ ಕಾಟದಿಂದಾಗಿ ಊರಲ್ಲಿ ಕದ್ದುಮುಚ್ಚಿ ಇಸ್ಪೀಟ್ ಆಡುತ್ತಿದ್ದರು. ಹತ್ತೋ, ಇಪ್ಪತ್ತೋ ರೂಪಾಯಿ ಕೊಟ್ಟರೆ ಸಾಕು ಬಸಪ್ಪ ಶ್ರದ್ಧಾ ಭಕ್ತಿಯಿಂದ ಇಸ್ಪೀಟ್ ಆಡುವವರಿಗೆ ಚಹಾ, ತಿಂಡಿ, ದಾರು, ಬೀಡಿ, ಸಿಗರೇಟ್ ತಂದುಕೊಡುವ ಕೆಲಸ ಮಾಡುತ್ತಿದ್ದ. ಚುನಾವಣೆಗಳು ಬಂದ ರಂತೂ ಸಾಕು ಬಸಪ್ಪನ ಅತಾರವೇ ಬದಲಾಗಿ ಹೋಗುತ್ತಿತ್ತು. ಯಾವ ಪಕ್ಷದವರು ಕರೆದರೂ ಒಲ್ಲೆ ಅನ್ನದೆ ಜೀಪ್ ಹತ್ತಿ ಅವರೊಡನೆ ಚುನಾವಣೆ ಪ್ರಚಾರಕ್ಕೆ ಹೋಗಿ ಬಿಡುತ್ತಿದ್ದ. ಪಕ್ಷಭೇದ ಮರೆತು ಕೆಲಸ ಮಾಡುವವನು ಅಂದ್ರೆ ಬಸಪ್ಪ ಒಬ್ಬನೆ ಬಿಡ್ರಿ ಅಂತ ಜನ ಮಾತಾಡಿಕೊಳ್ಳುತ್ತಿದ್ದರು.

ಮಗ ಉಡಾಳನಂತೆ ಓಡಾಡುತ್ತಿದ್ದುದು ಸೀತವ್ವಗೆ ಅತೀವ ಬೇಸರ ತರಿಸುತ್ತಿತ್ತು. ಕೆಲವೊಮ್ಮೆ ಒಬ್ಬನನ್ನೆ ಕೂಡಿಸಿಕೊಂಡು ಬುದ್ಧಿ ಮಾತು ಹೇಳುತ್ತಿದ್ದಳು. ಮನ್ಯಾಗ ಬಂಗಾರದಂತ ಹೆಣ್ತಿ ಅದಾಳ, ಆಕಿಗಿ ಒಂದಿನಾರ ಖುಷಿಯಿಂದ ಇಟ್ಟಿದ್ದೇನು ನೀ. ಅಲ್ಯಾಕ ಹೋಗಿ ಕೂಡ್ತಿ ನೀ. ಲಚ್ಚವ್ವ ಸರ್‍ಯಾಗಿಲ್ಲ ಅಂತ ಊರ ಮಂದಿನೇ ಮಾತಾಡ್ತಾದ. ಏನಾದ್ರು ಕೆಲಸ ಮಾಡು ಮಾರಾಯ ನಿನ್ನ ಮ್ಯಾಲ ನಂಬಿಕಿ ಇಟ್ಟು ಆ ಹುಡಗಿಗಿ ತಂದು ಕಟ್ಟಿನಿ, ನಿನ್ನ ಗುಣಕ ಯಾರು ಹೆಣ್ಣು ಕೊಡುತಿದ್ರು ನೀ ಹಿಂಗ ಮಾಡಾಕತ್ತಿ ಅಂದ್ರ ಆಕಿನ ತವರು ಮನಿಗಿ ಕಳಿಸಬೇಕಾಗ್ತದ ನೋಡು' ಅಂತ ಅಂಜಿಕಿ ಹಾಕಿದ್ಳು. 'ಸುಮ್ನಿರವ್ವ ನಿನಗೇನೂ ಗೊತ್ತಾಗಾಂಗಿಲ್ಲ. ಯಾವ ನನ್ನ ಮಗ ಈ ಊರಾಗ ಕೆಲಸಾ ಕೊಡ್ತಾನ. ಹತ್ತು ಇಪ್ಪತ್ತು ರುಪಾಯಿ ಕೊಟ್ಟು ರಾತ್ರಿ ಹಗಲು ದುಡಿಸ್ಕೊಂತಾರ' ಅಂತ ಸಿಟ್ಟು ಮಾಡಿಕೊಂಡು ಜಾಗ ಖಾಲಿ ಮಾಡ್ತಿದ್ದ. ಹೀಂಗಾದ್ರ ಇಂವ ಉದ್ಧಾರಾಗಂಗಿಲ್ಲ ಅಂತ ಸೀತವ್ವ ಓಣ್ಯಾಗಿನ ದೊಡ್ಡವರು, ಸ್ಯಾಣ್ಯಾರು ಕೈಯಿಂದ್ಲೂ ಬುದ್ಧಿ ಹೇಳಿಸಿ ನೋಡಲು ಪ್ರಯತ್ನಿಸಿದಳು. ಆದರೆ ಬಸಪ್ಪ ಮಾತ್ರ ಯಾರ ಮಾತು ಕಿವಿಗೆ ಹಾಕಿಕೊಳ್ಳದೆ ತನ್ನ ಚಾಳಿ ಮುಂದುವರಿಸಿದ.



ಕಿತ್ತು ತಿನ್ನುವ ಬಡತನ, ಮಾತು ಕೇಳದ ಮಗ. ಸೀತವ್ವಗೆ ಜೀವನಾನೇ ಬೇಸರ ವೆನಿಸತೊಡಗಿತು. ಏನು ಮಾಡಬೇಕು ಎಂದು ತೋಚದೆ ಒಬ್ಬಳೆ ಕುಳಿತು ಅತ್ತು ಸಮಾಧಾನ ತಂದುಕೊಳ್ಳುತ್ತಿದ್ದಳು.

ಏನೂ ಅರಿಯದ ಹುಡುಗಿ ತಂದು ಇವನಂಥವನಿಗೆ ಕಟ್ಟಿ ತಪ್ಪು ಮಾಡಿದ್ನಿ. ಮಾಡಿ ಉಣ್ಣುವವರ ಮನಿಗಿ ಕೊಟ್ಟಿದ್ರ ಅಲ್ಲಾದ್ರು ನಮ್ಮ ಸಂಗವ್ವ ಚೆನ್ನಾಗಿರುತ್ತಿದ್ದಳೋ ಏನೋ ಅಂತ ಮುದುಕಿ ಆಗಾಗ ಓಣಿ ಹೆಣ್ಣುಮಕ್ಕಳ ಮುಂದ ಅನ್ನುತ್ತ ಕಣ್ಣೀರು ಹಾಕುತ್ತಿದ್ದಳು. ಮಗ ಹಿಂಗಾದ್ನಲ್ಲ ಅಂತ ಮುದುಕಿ ಕೊರಗಿ ಕೊರಗಿ ಜೀವ ಬಿಟ್ಟು. ನೆತ್ತಿಗೆ ಆಸರೆ ಇದ್ದಾಂಗ ಇದ್ದ ಅತ್ತೆನೇ ಸತ್ತೋದ ಮ್ಯಾಗ ಬಸಪ್ಪನ ಹೆಂಡ್ತಿ ಸಂಗವ್ವ ಧೈರ್ಯಗೆಟ್ಟು, ಅತ್ತೆ ಅಂಜಿಕೆಗೆ ಮನೆಯಿಂದ ಹೊರಗೆ ಕಾಲಿಡದೆ, ಆಕೆ ಗುಡ ಕೂಲಿ ನಾಲಿ ಮಾಡಿ ಹೆಂಗೋ ಜೀವನ ಕಳಿತಿದ್ದವಳು ದಾರಿ ಬಿಟ್ಟಳು. ಮನ್ಯಾಗ ಯಾರೂ ಇರುತಾ ಇರಲಿಲ್ಲವಾದುದರಿಂದ ಕಂಡ ಕಂಡವರೆಲ್ಲಾ ಮನೆಗೆ ಬರಾಕತ್ರು. ಬಸಪ್ಪಗ ಇದೆಲ್ಲಾ ಗೊತ್ತಿದ್ರು ಗೊತ್ತಿಲ್ಲದಂಗ ಸುಮ್ನಿದ್ದ. ಹೀಂಗಾದ್ರ ಬಗಿ ಹರ್‍ಯಾಂಗಿಲ್ಲ ಅಂತ ಸಂಗವ್ವ ತವರು ಮನೆಗೆ ಹೋಗಿಬಿಟ್ಳು. ಹೆಂಡ್ತಿ ಹೋದ್ದದು ಚಲೋ ಆಯ್ತು ಅಂತ ಬಸಪ್ಪ ತೀರಾ ಪಾರಾ ಪಟ್ಟಿಯಾದ. ಎಲೆಕ್ಷನ್ ಇರಲಿ, ಮದುವೆ ಮುಂಜಿ ಇರಲಿ. ಒಳ್ಳೆದು ಕೆಟ್ಟದ್ದು ಇರಲಿ ಅಲ್ಲಿ ಬಸಪ್ಪ ಹಾಜರಿರುತ್ತಿದ್ದ. ಒಬ್ರಲ್ಲ ಒಬ್ರು ಅವನ ಕರ ಕೊಂಡು ಊರು ಕೇರಿ ಹೋಗತಿದ್ರು. ಒಂದು ನೆಹರೂ ಶರ್ಟ್, ಒಂದು ಪೈಜಾಮ ಇದ್ದುಬಿಟ್ಟರೆ ಕೊರಳಿಗೆ ಒಂದು ಟವಲು ಹಾಕ್ಕೊಂಡು ಬಸಪ್ಪ ಕರೆದವರ ಹಿಂದ ಬೆನ್ನತ್ತಿ ಊರೂರು ಅಲಿತಿದ್ದ. ಊರಾಗಿನ ಹೆಂಗಸರಿಗೆ ಬಸಪ್ಪಂದ್ರ ಬಾಳ ಪ್ರೀತಿ. ಕೆಲವೊಬ್ರು ಒಂಟಿ ಬಸ್ಯಾಗ ಹಿಡಿದರ ಕೆಲಸಾ ಆಗ್ತದ ಅತ ಅಂತಿದ್ರು. ದೊಡ್ಡವರು, ಸಣ್ಣವರು ಮುದುಕ್ರು, ತದುಕ್ರು ಅನ್ನದೆ ಎಲ್ಲರೂ ಒಂಟಿ ಬಸಪ್ಪ ಅಂತಾನೆ ಕರಿತಿದ್ರು. ಊರು ಕೇರಿ ಓಡಾಡುತ್ತಿದ್ದುದರಿಂದ ಅಷ್ಟು ಇಷ್ಟು ಓದಲು, ಬರೆಯಲು ಸಹ ಬರುತ್ತಿದ್ದುದ್ದರಿಂದ ಬಸಪ್ಪ ದೇವರು, ದಿಂಡಿರು ನಂಬದೆ ಒಂದು ರೀತಿಯಲ್ಲಿ ಸ್ಯಾಣ್ಯಾ ಮನುಷ್ಯನಂತೆ ಮಾತಾಡುತ್ತಿದ್ದ. ಕೇರಿ ಜನ ಮರಗ, ದುರಗಮ್ಮನ ಜಾತ್ರಿ ಮಾಡಿ ಕುರಿ ಬಲಿ ಕೊಡುವುದನ್ನು ನೋಡಿ ಇವನವುನ ಇವಂತೂ ಉದ್ಧಾರಾಗಂಗಿಲ್ಲ. ಇನ್ನೂ ಅದೇ ಕಾಲದಾಗ ಅವ, ಆ ನನ್ನ ಮಗನಿಗಿ ಮೈಮ್ಯಾಗ ದೇವ್ರು ಬರ್‍ತಾನಂತ... ಅದೇನು ಕುಣಿತಾನ್ರಿ ಬಂಡಾರ ಹಚ್ಚಕೊಂಡು, ದೆವ್ವ ಕುಣಿದಂಗ. ಈ ಜನಕ್ಕಂತೂ ಒಂದಿಷ್ಟೂ ಬುದ್ಧಿ ಇಲ್ಲ. ಅವನ ಕಾಲಿಗಿ ಬಿದ್ದು ಸೆಣ ಮಾಡ್ತಾವ. ಕಲ್ಲು ದೇವ್ರಿಗಿ ಕಾಯಿ, ಕರ್ಪೂರ ಒಡೆದು ಸಾಲ ಮಾಡ್ಕೋಂತಾವ. ಮಕ್ಕಳಿಗೆ ಸಾಲಿಗಾದ್ರೂ ಕಳಿಸಿದ್ರ ಒಂದೆರಡು ಅಕ್ಷರ ಕಲಿತು ಮುಂದ ಹೋಗತಾವ, ಊರ ಮಂದಿಯಂಗ ನೌಕರಿ ಸೇರಬೇಕು ಅಂತ ಜಿದ್ದಿಲ್ಲ ಇವಕ್ಕ– ಅಂತ ವಾರಿಗೆಯವರೊಡನೆ ಮಾತಾಡುತ್ತ ಕೇರಿಯ ಜನರ ನಡವಳಿಕೆಯ ಬಗ್ಗೆ ಆಚಾರ ವಿಚಾರಗಳ ಬಗ್ಗೆ ಬೇಸರಪಡುತ್ತಿದ್ದ.

ಇಷ್ಟೆಲ್ಲಾ ಬುದ್ಧಿ ಹೇಳುತ್ತಿದ್ದ ಬಸಪ್ಪ ಮಾತ್ರ ಯಾವುದೇ ಕಾರಣಕ್ಕೂ ತಾನು ಬದಲಾಗಬೇಕು ಎಂಬ ವಿಚಾರ ಮಾಡುತ್ತಿರಲಿಲ್ಲ. ಯಾವುದೇ ಕಾರಣಕ್ಕೂ ಊರೂರು ಅಲಿಯುವುದನ್ನು ಬಿಡಲಿಲ್ಲ.

ತಾಯಿ ಸತ್ಳು. ಹೆಂಡ್ತಿ ಬಿಟ್ಹೋದ್ಳು, ಇದ್ದ ಒಂದು ಮನೇನು ಜಂತಿ ಮುರಿದು ಪಾಳು ಬಿತ್ತು. ಬಸಪ್ಪ ಮಾತ್ರ ಈಗಲೂ ಹಂಗ ಅದಾನ. ಅದೇ ಹಾಳು ಮನೆಯಲ್ಲೀಗ ಊರ ಉಡಾಳರು, ಇಸ್ಪೀಟ್ ಆಡುವವರು, ಕುಡುಕರು, ರಂಡ ಬಾಜಿ ಮಾಡ್ತಾರ– ಆದ್ರೂ ಬಸಪ್ಪ ಮಾತ್ರ ಬದಲಾಗಿಲ್ಲ.